O.S .No. 130/2013
PW-1

ದಿನಾಂಕ: 13.03.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು **2** ರಿಂದ **4** ನೇ ಪ್ರತಿವಾದಿ ಪರ ಶ್ರೀ ಎಂ.ಎಸ್.ಆರ್, ವಕೀಲರಿಂದಃ</u>

ನಿಮ್ಮ ಒಡ ಹುಟ್ಟಿದ ಅಕ್ಕ-ತಂಗಿಯರು ಇದ್ದಾರೆ ಎಂದರೆ ಸರಿಯಲ್ಲ. ಬಸವಲಿಂಗಪ್ಪ-ಕೆಂಪಮ್ಮ ರವರಿಗೆ ಒಬ್ಬನೇ ಮಗ ಎಂದು ತೋರಿಸಲು ಯಾವುದಾದರೂ ಸರ್ಕಾರಿ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ದಾವೆಯಲ್ಲಿ ಹೇಳಿದ ಕೆಂಪಮ್ಮ ನಿಮ್ಮ ತಾಯಿ ಅಲ್ಲ ಎಂದರೆ ಸರಿಯಲ್ಲ.ಕೆಂಪಮ್ಮ ರವರ ತಾತ ಹಾಗೂ ಅಜ್ಜಿಯ ಹೆಸರು ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಕೆಂಪಮ್ಮನ ತಂದೆಯ ಒಡ ಹುಟ್ಟಿದವರು ಎಷ್ಟು ಜನ ಎಂದು ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಕೆಂಪಮ್ಮ ರವರು ಅವರ ಗಂಡನ ಮನೆಗೆ ಸೇರಿದ ಆಸ್ತಿಯ ಸಂಬಂಧ ದಾವೆ ಹೂಡಿದ್ದರು. ಕೆಂಪಮ್ಮ ಯಾರ್ಯಾರ ಮೇಲೆ ದಾವೆ ಹೂಡಿದ್ದರು ಎಂದರೆ ಸಾಕ್ಷಿ ನನ್ನ ತಂದೆ ಬಸವಲಿಂಗಯ್ಯ ರವರ ಮೇಲೆ ಹೂಡಿದ್ದರು ಎಂದು ಹೇಳುತ್ತಾರೆ. ಕೆಂಪಮ್ಮ ರವರು ನಿಮ್ಮ ತಂದೆಯ ವಿರುದ್ಧ ದಾವೆ ಹೂಡಿದ್ದರು ಎಂದು ತೋರಿಸಲು ದಾಖಲಾತಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಕೆಂಪಮ್ಮ ರವರು ಹೂಡಿದ ದಾವೆ ಯಾವ ನ್ಯಾಯಾಲಯದಲ್ಲಿ ನಡೆಯಿತು ಎಂಬ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನಾವು ಚಿಕ್ಕವರಾಗಿದ್ದರಿಂದ ನಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಅಸಲು ದಾವೆ ನಂ.384/1938-39 ರ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಸಿಕ್ಕಿಲ್ಲದೇ ಇರುವುದರಿಂದ ಹಾಜರುಪಡಿಸಿಲ್ಲ ಎಂದು ಹೇಳುತ್ತಾರೆ. ಕೆಂಪಮ್ಮ ರವರು ನಿಮ್ಮ ತಂದೆಯ ವಿರುದ್ಧ ಏನು ಪರಿಹಾರ ಕೋರಿ ದಾವೆ ಹೂಡಿದ್ದರು ಎಂದರೆ ಸಾಕ್ಷಿ ಭಾಗ ಕೋರಿ ಎಂದು ಹೇಳುತ್ತಾರೆ.

ದಾವಾ ಆಸ್ತಿ 1938-39 ರಲ್ಲಿ ಯಾರ ಹೆಸರಿನಲ್ಲಿತ್ತು ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. 1938-39 ರಲ್ಲಿ ನಿಮ್ಮ ತಂದೆಯ ಹೆಸರಿನಲ್ಲಿ ದಾವಾ ಆಸ್ತಿ ಇತ್ತು ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿ ನಿಮ್ಮ ತಂದೆಯ ತಂದೆ ಹೆಸರಿನಲ್ಲಿ ಇತ್ತು ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

ಸ.ನಂ.71/1, 1 ಎಕರೆ 1 ಗುಂಟೆ, ಸ.ನಂ.71/2 ರಲ್ಲಿ 5 ಎಕರೆ 39 ಗುಂಟೆ, ಸ.ನಂ.71/3 ರಲ್ಲಿ 8 ಎಕರೆ 24 ಗುಂಟೆ ಒಟ್ಟು ವಿಸ್ತೀರ್ಣ 16 ಎಕರೆ 4 ಗುಂಟೆ ಪೈಕಿ 8 ಎಕರೆ ಕೆಂಪಮ್ಮ ನಿಗೆ ಯಾವ ಯಾವ ಜಮೀನಿನಲ್ಲಿ ಎಷ್ಟು ಎಷ್ಟು ಗುಂಟೆ ಬಂತು ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ನಿಮ್ಮ ವಾದ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪ್ರಮಾಣ ಪತ್ರದಲ್ಲಿ ಕೆಂಪಮ್ಮ ರವರಿಗೆ ಯಾವ ಯಾವ ಜಮೀನಿನಲ್ಲಿ ಎಷ್ಟು ಎಷ್ಟು ಗುಂಟೆ ಬಂತು ಎಂದು ಬರೆಸಿ ಹಾಕಿದ್ದೀರಾ ಎಂದರೆ ಸಾಕ್ಷಿ ಹಾಕಿದ್ದೇನೆ ಎಂದು ಹೇಳುತ್ತಾರೆ. ಕೆಂಪಮ್ಮ ರವರ ಹೆಸರಿನಲ್ಲಿ ಎಷ್ಟನೇ ಇಸವಿಯವರೆಗೂ ಪಹಣಿ ಚಾಲ್ತಿಯಲ್ಲಿತ್ತು ಎಂದರೆ ಸಾಕ್ಷಿ 1994 ವರೆಗೂ ಎಂದು ಹೇಳುತ್ತಾರೆ. ಸ.ನಂ.71/2 ಮತ್ತು 71/3 ಯಾರ ಹೆಸರಿನಲ್ಲಿ ಈಗ ಆಸ್ತಿ ನಮೂದು ಇದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ಸ.ನಂ.71/2 ಮತ್ತು 71/3 ಕೆಂಪಮ್ಮ ರವರ ಹೆಸರಿನಲ್ಲಿ ಇದ್ದ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಸ.ನಂ.71/2 ಮತ್ತು 71/3 ಕೆಂಪಮ್ಮ ಮೃತಪಟ್ಟ ನಂತರ ನಿಮ್ಮ ಹೆಸರಿಗೆ ಬಂತಾ ಎಂದರೆ ಸಾಕ್ಷಿ ಬಂದಿಲ್ಲ ಎಂದು ಹೇಳುತ್ತಾರೆ. ಕೆಂಪಮ್ಮ ರವರ ಹೆಸರಿನಿಂದ ನಿಮ್ಮ ಹೆಸರಿಗೆ ಯಾಕೆ ಖಾತೆ ಆಗಿಲ್ಲ ಎಂದು ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಸ.ನಂ.71/2 ಮತ್ತು 71/3 ಕೆಂಪಮ್ಮ ಯಾರಿಗಾದರೂ ದಾನ, ಕ್ರಯ, ವಗೈರೆ ಮಾಡಿದ್ದಾರಾ ಎಂದು ಪರಿಶೀಲಿಸಿದ್ದೀರಾ ಎಂದರೆ ಸಾಕ್ಷಿ ಏನು ಮಾಡಿಲ್ಲ ಎಂದು ಹೇಳುತ್ತಾರೆ. ಕೆಂಪಮ್ಮ ರವರು ನಿಮ್ಮ ತಾಯಿ ಅಲ್ಲ, ದಾವಾ ಆಸ್ತಿಯನ್ನು ಖರೀದಿ ಮಾಡಿರುವವರಿಂದ ದುರುದ್ದೇಶದಿಂದ ಹಣ ಪಡೆದುಕೊಳ್ಳಬೇಕೆಂಬ ಕಾರಣದಿಂದ ದಾವೆ ಹೂಡಿದ್ದೀರಾ ಎಂದರೆ ಸರಿಯಲ್ಲ.

ದಾವಾ ಆಸ್ತಿ ಈರಯ್ಯ ಬಿನ್ ಹಲಗಯ್ಯ ರವರ ಹೆಸರಿನಲ್ಲಿತ್ತು ಎಂದರೆ ಸರಿಯಲ್ಲ. ಈರಯ್ಯ ಬಿನ್ ಹಲಗಯ್ಯ ರವರು ಕೆಂಪಮ್ಮ ರವರಿಗೆ ಸಂಬಂಧಿಕರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಕೆಂಪಮ್ಮ ರವರು 1986 ರಲ್ಲಿ ಮೃತಪಟ್ಟಿರುತ್ತಾರೆ. ಕೆಂಪಮ್ಮ ರವರು 1938-39 ರಂದು ಹೂಡಿದ ದಾವೆಯನ್ನು ಹೊರತು ಪಡಿಸಿ ಬೇರೆ ಯಾವುದಾದರೂ ದಾವೆಯನ್ನು ದಾವಾ ಆಸ್ತಿಯ ಮೇಲೆ ಹೂಡಿದ್ದರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಯನ್ನು 1960 ರಲ್ಲಿ ಹಲಗಯ್ಯ ರವರ ಮಗ ಈರಯ್ಯ ರವರು 1 ನೇ ಪ್ರತಿವಾದಿಗೆ ಮಾರಾಟ ಮಾಡಿದ ವಿಚಾರ ನಿಮಗೆ ಗೊತ್ತು ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 1960 ರಲ್ಲಿ ಮಾರಾಟ ಮಾಡಿದ ಬಗ್ಗೆ ಕ್ರಯ ಪತ್ರವನ್ನು

ನೋಡಿದ್ದೀರಾ ಎಂದರೆ ಸಾಕ್ಷಿ ನೋಡಿಲ್ಲ  ಎಂದು ಹೇಳುತ್ತಾರೆ. ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳನ್ನು ನೀವೇ ತೆಗೆದುಕೊಂಡಿರೋ, ವಕೀಲರು ತೆಗೆದುಕೊಂಡರೋ ಎಂದರೆ ಸಾಕ್ಷಿ ನಾವೇ ತೆಗೆದುಕೊಂಡೆವು ಎಂದು ಹೇಳುತ್ತಾರೆ.  ಸಾಕ್ಷಿಗೆ ನಿಪಿ-5 ನ್ನು ತೋರಿಸಿ, ಅದನ್ನು ನೀವೇ ನ್ಯಾಯಾಲಯದ ಮುಂದೆ ನಿಪಿ-5 ಆಗಿ ಗುರುತು ಮಾಡಿಸಿಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ  ಎಂದು ಹೇಳುತ್ತಾರೆ. ದಾವಾ ಆಸ್ತಿಯನ್ನು 1 ನೇ  ಪ್ರತಿವಾದಿ 2 ನೇ  ಪ್ರತಿವಾದಿಯ ಗಂಡ ತಿಮ್ಮಯ್ಯ ರವರಿಗೆ 1992 ರಲ್ಲಿ ಮಾರಾಟ ಮಾಡಿದ ವಿಚಾರ ಗೊತ್ತಾ ಎಂದರೆ ಸಾಕ್ಷಿ ಇಲ್ಲ  ಎಂದು ಹೇಳುತ್ತಾರೆ. ದಾವಾ  ಆಸ್ತಿಯನ್ನು 1 ನೇ  ಪ್ರತಿವಾದಿ 2 ನೇ  ಪ್ರತಿವಾದಿಯ ಗಂಡ ತಿಮ್ಮಯ್ಯ ರವರಿಗೆ 1992 ರಲ್ಲಿ ಮಾರಾಟ ಮಾಡಿದ ಕ್ರಯ ಪತ್ರ ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ  ಎಂದು ಹೇಳುತ್ತಾರೆ. ದಾವಾ ಆಸ್ತಿಯನ್ನು 1 ನೇ  ಪ್ರತಿವಾದಿ 2 ನೇ  ಪ್ರತಿವಾದಿಯ ಗಂಡ ತಿಮ್ಮಯ್ಯ ರವರಿಗೆ 1992 ರಲ್ಲಿ ಮಾರಾಟ ಮಾಡಿದ ಕ್ರಯ ಪತ್ರವನ್ನು ನೀವೇ ನ್ಯಾಯಾಲಯಕ್ಕೆ ನಿಪಿ-6 ಆಗಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ  ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ನೀವಾಗಲೀ, ಕೆಂಪಮ್ಮನಾಗಲೀ ಎಂದೂ ಸ್ವಾಧೀನ ಇಲ್ಲ  ಎಂದರೆ  ಸರಿಯಲ್ಲ. ದಾವೆ ಹೂಡುವ ಕಾಲಕ್ಕೆ ದಾವಾ ಆಸ್ತಿಯಲ್ಲಿ ನೀವು ಸ್ವಾಧೀನ ಇರಲಿಲ್ಲ  ಎಂದರೆ  ಸರಿಯಲ್ಲ. ದಾವೆಯಲ್ಲಿನ ಪ್ರತಿವಾದಿಗಳು ಯಾರು, ಯಾವತ್ತು ನನ್ನ ಮೇಲೆ ಗಲಾಟೆ ಮಾಡಿಲ್ಲ.

ಈರಯ್ಯ ಬಿನ್ ಹಲಗಪ್ಪ 1 ನೇ  ಪ್ರತಿವಾದಿಗೆ ಮಾರಾಟ ಮಾಡಿದ್ದಾರೆಂದು ವಾದ ಪತ್ರದಲ್ಲಿ ನಮೂದಿಸಿದ್ದು, ಸದರಿ ಈರಯ್ಯ ರವರನ್ನು ದಾವೆಯಲ್ಲಿ ಪಕ್ಷಗಾರರಾಗಿ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನಾವು ಮಾರಾಟ ಮಾಡಿಲ್ಲದೇ ಇರುವುದರಿಂದ ಮಾಡಿಲ್ಲ ಎಂದು ಹೇಳುತ್ತಾರೆ.

ದಾವಾ ಆಸ್ತಿಯ ಪೂರ್ವಕ್ಕೆ ಯಾರು ಇದ್ದಾರೆಂದರೆ ಸಾಕ್ಷಿ ಅವರ ಹೆಸರು ಗೊತ್ತಿಲ್ಲ ಎಂದು ಹೇಳುತ್ತಾರೆ.  ದಾವಾ ಆಸ್ತಿಯ ಪಶ್ಚಿಮಕ್ಕೆ ನಿಂಗರಾಜಪ್ಪ ಎಂಬುವವರು ರಾಗಿ, ಹುರುಳಿ ಬೆಳೆ ಬೆಳೆಯುತ್ತಿದ್ದಾರೆ. ದಾವಾ ಆಸ್ತಿಯ ಉತ್ತರಕ್ಕೆ ಮತ್ತು ದಕ್ಕಿಣಕ್ಕೆ ಯಾರು ಇದ್ದಾರೆಂದರೆ ಸಾಕ್ಷಿ ಅವರ ಹೆಸರು ಗೊತ್ತಿಲ್ಲ, ಜಮೀನು ಪಾಳು ಬಿದ್ದಿದೆ  ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ನೀವು ಹಾಗೂ ಕೆಂಪಮ್ಮ ಸ್ವಾಧೀನ ಇಲ್ಲ, ಹಾಗಾಗಿ ದಾವಾ ಆಸ್ತಿಯ ಚೆಕ್ಕುಬಂಧಿ ನಿಮಗೆ ಗೊತ್ತಿಲ್ಲ  ಎಂದರೆ  ಸರಿಯಲ್ಲ. ಕೆಂಪಮ್ಮನಿಗೆ ಯಾವುದೇ ನ್ಯಾಯಾಲಯದ ಡಿಕ್ರಿಯಾಗಿಲ್ಲ, ಆಗಿದ್ದರೆ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೀರಿ, ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ದಾಖಲಾತಿ ಸೃಷ್ಟಿ

ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನೀವಾಗಲೀ, ಮನೆಯವರಾಗಲೀ, ಕೆಂಪಮ್ಮ ರವರಾಗಲೀ ಎಂದೂ ಸ್ವಾದೀನ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಈರಯ್ಯ ಬಿನ್ ಹಲಗಪ್ಪ ರವರು 1 ನೇ ಪ್ರತಿವಾದಿಗೆ 1960 ರಲ್ಲಿ ತಮ್ಮ ಹಕ್ಕು ಮತ್ತು ಸ್ವಾಧೀನದಲ್ಲಿದ್ದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 2 ನೇ ಪ್ರತಿವಾದಿಯ ಗಂಡನಿಗೆ ತನ್ನ ಹಕ್ಕು ಮತ್ತು ಸ್ವಾಧೀನದಲ್ಲಿದ್ದ ದಾವಾ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ತಿಮ್ಮಯ್ಯ ಮೃತಪಟ್ಟ ನಂತರ ಪ್ರತಿವಾದಿ 2 ರಿಂದ 4 ರವರ ಹೆಸರಿಗೆ ಪೌತಿ ಖಾತೆಯ ಮೇರೆಗೆ ಖಾತೆ ಮಾಡಿ, ಅವರ ಹಕ್ಕು, ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ನಿಪಿ-5 ಮತ್ತು 6 ನ್ನು ಯಾವುದಾದರೂ ನ್ಯಾಯಾಲಯದ ಮುಂದೆ ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿ ಮಾಡಿಯೇ, ದಾಖಲಾತಿ ತಂದು ಈ ನ್ಯಾಯಾಲಯಕ್ಕೆ ತಂದು ಸಲ್ಲಿಸಿರುತ್ತೇವೆ ಎಂದು ಹೇಳುತ್ತಾರೆ. ಈಶ್ವರ ರವರ ಹೆಸರಿನಲ್ಲಿದ್ದ ಹಾಗೂ 1 ರಿಂದ 4 ನೇ ಪ್ರತಿವಾದಿಗಳ ಹೆಸರಿನಲ್ಲಿದ್ದ ರೆವಿನ್ಯೂ ದಾಖಲಾತಿಗಳನ್ನು ಯಾವುದಾದರೂ ನ್ಯಾಯಾಲಯದ ಮುಂದೆ ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿ ಮಾಡಿದ್ದೇವೆ ಎಂದು ಹೇಳುತ್ತಾರೆ. ಪ್ರಶ್ನೆ ಮಾಡಿದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಡಲು ತೊಂದರೆ ಇದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ನಿಪಿ-5 ಮತ್ತು 6 ರೆವಿನ್ಯೂ ದಾಖಲಾತಿಗಳನ್ನು ಯಾವುದಾದರೂ ನ್ಯಾಯಾಲಯದ ಮುಂದೆ ಪ್ರಶ್ನೆ ಮಾಡಿಲ್ಲ, ಪ್ರಶ್ನೆ ಮಾಡಿದ್ದರೆ ತೊಡಕಿದೆ ಎಂಬ ಕಾರಣಕ್ಕಾಗಿ ದಾಖಲಾತಿಗಳನ್ನು ಸೃಷ್ಟಿಸಿಕೊಂಡು ದಾವೆ ಹೂಡಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಯಾವತ್ತಾದರೂ ನೀವು ತಂತಿ ಬೇಲಿ ಹಾಕಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಜನವರಿ 2013 ರಲ್ಲಿ ಪ್ರತಿವಾದಿಗಳು ನಿಮ್ಮ ಸ್ವಾಧೀನವನ್ನು ಹಿಂದಕ್ಕೆ ಪಡೆದಿರುತ್ತಾರೆಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ನಿಪಿ-9 ರಂತೆ ಚಾಪಾ ಕಾಗದವನ್ನು ಹಣ ಪಾವತಿಸಿ ನಾನೇ ತೆಗೆದುಕೊಂಡಿರುತ್ತೇನೆ. ನಿಪಿ-9 ರಂತೆ ಚಾಪಾ ಕಾಗದ ಪಡೆದ ಬಗ್ಗೆ ಹೆಸರು ನಮೂದಿಸಿಲ್ಲ, ಅದನ್ನು ಬೇರೆದವರು ಪಡೆದದ್ದು ಎಂದರೆ ಸರಿಯಲ್ಲ. ನಿಪಿ-9 ರಂತೆ ಬೇರೆಯವರ ಹೆಸರನಲ್ಲಿದ್ದ ಚಾಪಾ ಕಾಗದವನ್ನು ಈ ದಾವೆಗೊಸ್ಕರ ವಂಶವೃಕ್ಷ ಸೃಷ್ಟಿ ಮಾಡಲು ಪಡೆದಿರುತ್ತೀರಾ ಎಂದರೆ ಸರಿಯಲ್ಲ. ನಿಪಿ-9 ರಲ್ಲಿ ಸುಳ್ಳು ವಂಶವೃಕ್ಷವನ್ನು ಬರೆಸಿರುತ್ತೀರಾ ಎಂದರೆ ಸರಿಯಲ್ಲ. ನಿಪಿ-9 ರಲ್ಲಿ ನಿಮಗೆ 2013 40 ವರ್ಷ ಎಂದು ನಮೂದಿಸಿದ್ದು, ವಾದಪತ್ರದಲ್ಲಿ 46 ವರ್ಷ ಎಂದು ನಮೂದಿಸಿದ್ದೀರಿ ಎಂದರೆ ಸಾಕ್ಷಿಹೆಚ್ಚು-ಕಡಿಮೆ ಹೇಳಿರುತ್ತೇನೆ ಎಂದು ಹೇಳುತ್ತಾರೆ.

ದಾಖಲಾತಿಗಳನ್ನು ನಿಮ್ಮ ಅನುಕೂಲಕ್ಕೆ ತಕ್ಕಂತೆ ದಾವೆಗೊಸ್ಕರ ಸೃಷ್ಟಿ ಮಾಡಿರುತ್ತೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಮೇಲೆ ನಿಮಗೂ ಹಾಗೂ ಕೆಂಪಮ್ಮನಿಗೂ ಯಾವುದೇ ಹಕ್ಕು ಇಲ್ಲದೇ ಇದ್ದರೂ, ಸೃಷ್ಟಿ ಮಾಡಿದ ದಾಖಲೆಯ ಮೇಲೆ, ಸುಳ್ಳು ದಾವೆ ಹೂಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀ ಸವಾಲು **6** ನೇ ಪ್ರತಿವಾದಿ ಪರ ಶ್ರೀ ಎ.ಕೆ.ಎನ್. ವಕೀಲರಿಂದಃ

6 ನೇ ಪ್ರತಿವಾದಿ ವಕೀಲರು 2 ರಿಂದ 5 ನೇ ಪ್ರತಿವಾದಿಯ ಪಾಟೀಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ.

ಪಾಟೀ ಸವಾಲು **1** ನೇ ಪ್ರತಿವಾದಿ ಪರ ಶ್ರೀ ಎನ್.ಡಿ.ಎಸ್. ವಕೀಲರಿಂದಃ

ಕೂಗಿಸಲಾಯಿತು ಯಾರು ಬರದೇ ಇದ್ದುದರಿಂದ, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.